**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು ಪ್ರ ವರ್ಗ ಗೋಕಾಕ ಇವರ ನ್ಯಾಯಾಲಯ, ಗೋಕಾಕ.**

**ಸಿ.ಸಿ. ನಂಃ 3465-2017**

**ದೋಷಾರೋಪಣೆ**

*ನಾನು ಶ್ರೀ ವೀರೇಶ ಕುಮಾರ ಸಿ. ಕೆ.*
*ಬಿ.ಎ.ಎಲ್. ಎಲ್.ಎಲ್.ಎಮ್. ಸಿಸಿ ಇನ್ ಸೈಬರ ಲಾ*
ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ, ಗೋಕಾಕ

ಆರೋಪಿತನಾದಃ 1) ರಗುನಾಥ ವೆಂಕಪ್ಪಾ ಶಿಂಪಿ ಸಾಃ ಗೋಕಾಕ
2) ಶಾಮ ಅಪ್ಪಾ ಕಾಸ್ಗಾರ ಸಾಃ ಮಾಟೇವಾಡಿ ಸಾವಂತವಾಡಿ
3) ಅನಂತ ಚಂದ್ರಕಾಂತ ಘಾಟಗರ
ಸಾಃ ಕೂಟಾಲ ಬಿಂಗೋಳಿ

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನಂದರೆ,

ದಿನಾಂಕಃ 05-07-2017 ರಂದು ಸಾಯಂಕಾಲ 4.30 ಗಂಟೆ ಸಮಯದಲ್ಲಿ ಗೋಕಾಕ ಶಹರದ ವ್ಯಾಪ್ತಿಯ ಗೋಕಾಕ ಶಹರದ ಸಂಗಮ ನಗರ ಕಡೆಯಿಂದ ಮಾರ್ಕಂಡೇಯ ನದಿಯ ಸಾರ್ವಜನಿಕ ರಸ್ತೆಯಲ್ಲಿ ಆರೋಪಿತರಾದ ನೀವು ನಿಮ್ಮ ಕಾರ ಗಾಡಿ ನಂ.ಎಮ್.ಎಚ್.07/ಕ್ಯೂ-6750 ನೇದ್ದರ ಸೀಟನಲ್ಲಿ ಒಂದು ಪ್ಲಾವುಡ್ ಸನಮೈಕ ಬಾಕ್ಸ ಮತ್ತು ರೀಮೋಟ ಇಟ್ಟುಕೊಂಡು ಜನರಿಗೆ ಅದನ್ನು ತೋರಿಸಿ ಹಣದ ಅಮೀಶ ಒಡ್ಡಿ ಜನರಿಗೆ ಮೋಸ ಮಾಡಿ ಐಪಿಸಿ ಕಲಂ 420 ರಡಿ ಶಿಕ್ಷಿಸಲ್ಪಡುವ ಅಪರಾಧವನ್ನು ಸಮಾನ ಉದ್ದೇಶದಿಂದ ಮಾಡಿರುವಿರಿ.

ಮೇಲೆ ಹೇಳಿದ ದಿನ ಅದೇ ಸಮಯದಲ್ಲಿ ಮತ್ತು ಮೇಲೆ ಹೇಳಿದ ಸ್ಥಳದಲ್ಲಿ ಮೇಲೆ ಹೇಳಿದ ವಿಷಯದ ಸಲುವಾಗಿ ಆರೋಪಿತರಾದ ನೀವು ಮೇಲೆ ಹೇಳಿದ ಸದರಿ ವಾಹನದ ಸೀಟನಲ್ಲಿ ಒಂದು ಪ್ಲಾವುಡ್ ಸನಮೈಕ ಬಾಕ್ಸ ಮತ್ತು ರೀಮೋಟ ಇಟ್ಟುಕೊಂಡು ಜನರಿಗೆ ಅದನ್ನು ತೋರಿಸಿ ಹಣದ ಅಮೀಶ ಒಡ್ಡಿ ಕಳುವು ಮಾಡುವ ಪ್ರಯತ್ನದಲ್ಲಿದ್ದಾಗ ಸಿಕ್ಕು ಐ.ಪಿ.ಸಿ. ಕಲಂ 511 ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧವನ್ನು ಮಾಡಿರುವಿ.

ಸದರಿ ಅಪರಾಧಗಳು ಇದೇ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುವುದರಿಂದ ಅವು ನನ್ನಿಂದ ವಿಚಾರಣೆ ಆಗುತ್ತವೆ ಎಂದು ತಿಳಿಯಬಯಸುತ್ತೇನೆ.

ಗೋಕಾಕ
ದಿಃ

ಪ್ರ. ನ್ಯಾ. ದಂ. ಪ್ರ ವರ್ಗ ಗೋಕಾಕ